# ದಿವ್ಯಚೇತನದ ಮಹಾಸಮಾಧಿ

ಜುಲೈ ೪, ೨೦೦೧ ಇಸವಿಗೆ ಸ್ವಾಮಿ ವಿವೇಕಾನಂದರ ದಿವ್ಯ ಚೇತನ ಮಹಾ ಸಮಾಧಿ ಹೊಂದಿ ೯೯ ವರ್ಷಗಳು ಕಳೆದು, ೧೦೦ನೆ ವರ್ಷ ಪ್ರಾರಂಭವಾಗುತ್ತದೆ. ಸಾಮಾನ್ಯ ಜನರು ಅವರು ಆಕಸ್ಮಿಕವಾಗಿ ಅಥವಾ ಹೃದಯಾಘಾತದಿಂದ ಮರಣ ಹೊಂದಿದರೆಂದು ಭಾವಿಸಿದರೂ, ಆಧ್ಯಾತ್ಮಿಕ ದೃಷ್ಟಿಯಲ್ಲಿ ಅವರು ಸ್ವಇಚ್ಛೆಯಿಂದ ದೇಹತ್ಯಾಗ ಮಾಡಿದರು. ಶ್ರೀರಾಮಕೃಷ್ಣರು, ನರೇಂದ್ರ " ತಾನು ಯಾರೆಂದು ತಿಳಿದೊಡನೆಯೆ, ದೃಢಸಂಕಲ್ಪದ ಸಹಾಯದಿಂದ ಯೋಗಮಾರ್ಗವನ್ನವಲಂಬಿಸಿ ಒಡನೆಯೇ ದೇಹತ್ಯಾಗ ಮಾಡುವನು"ಎಂದು ಭವಿಷ್ಯ ನುಡಿದಿದ್ದರು. ೧೮೯೮ರಲ್ಲಿ ಅಮರನಾಥ ಯಾತ್ರೆಯ ನಂತರ ಸ್ವಾಮೀಜಿಯವರೇ ಹೇಳಿದರು: "ನಾನು ಇಚ್ಛಿಸುವವರೆಗೆ ಮರಣ ಬರದಂತೆ ಶಿವನೇ ನನಗೆ ವರ ಕೊಟ್ಟಿದ್ದಾನೆ." ಮಹಾಸಮಾಧಿಗೆ ಕೆಲವು ದಿನಗಳಿರುವಾಗ ಯಾರೋ ಸ್ವಾಮೀಜಿಯನ್ನು ಕೇಳಿದರು: "ನೀವು ಯಾರೆಂದು ನಿಮಗೆ ಅರಿವಾಗಿದೆಯೇ?" "ಹೌದು, ತಿಳಿದಿದ್ದೇನೆ!" ಎಂದು ಅವರು ಉತ್ತರಿಸಿ, ಕೇಳಿದವರನ್ನು ದಿಗ್ಭ್ರಾಂತಗೊಳಿಸಿದರೆಂದು ಸೋದರಿ ನಿವೇದಿತಾ ಬರೆದಿದ್ದಾರೆ.

ಸ್ವಾಮಿ ಪ್ರೇಮಾನಂದರು, ಆಗಸ್ಟ್ ೨೦, ೧೯೦೨ರಲ್ಲಿ, ಅಮೆರಿಕಾದಲ್ಲಿ ವೇದಾಂತ ಪ್ರಚಾರ ನಡೆಸುತ್ತಿದ್ದ ಸ್ವಾಮಿ ಅಭೇದಾನಂದರಿಗೆ ಬರೆದ ಪತ್ರದಲ್ಲಿ, ಮಹಾಸಮಾಧಿಯ ಹಾಗೂ ಮುನ್ನಿನ ದಿನಗಳ ವಿವರವನ್ನು ಕೊಡುತ್ತಾರೆ. ಇದು ಸ್ವಾಮೀಜಿಯವರ ಭೌತಿಕ ದೇಹದ ಕೊನೆಯ ದಿನದ ನಿರಂತರ ಚಟುವಟಿಕೆಯನ್ನು ಅತ್ಯಂತ ಸಮೀಪದಿಂದ ಕಂಡು ದಾಖಲಿಸಿದ ವಿವರಗಳಲ್ಲೊಂದು ಎಂದು ಪರಿಗಣಿಸಲಾಗಿದೆ :



ಆತ್ಮೀಯ ಸೋದರ ಕಾಳೀ,

ನಾವಿನ್ನೂ ಮಂಕು ಕವಿದ ಸ್ಥಿತಿಯಲ್ಲಿ ಇದ್ದೇವೆ. ಸ್ವಾಮೀಜಿಯವರಿಂದ ಹೊರಹೊಮ್ಮುತ್ತಿದ್ದ ದೈವೀಶಕ್ತಿ, ನಾವು ಸದಾ ಮುಂದುವರಿಯುವಂತೆ ಪ್ರೇರೇಪಿಸುತ್ತಿದ್ದ ಅವರಾಡುತ್ತಿದ್ದ ಅಧಿಕಾರಯುತವಾದ ವಾಣಿ, ನಮ್ಮ ಮನಸ್ಸಿನ ಭಾವನೆಗಳನ್ನು ವಿಶಾಲಗೊಳಿಸಲು ನಾವು ಅವರೊಡನೆ ನಡೆಸುತ್ತಿದ್ದ ಚರ್ಚೆ—ಎಲ್ಲವೂ ಮಾಯವಾದಂತೆ ಭಾಸವಾಗುತ್ತಿದೆ.

ಆಯುರ್ವೇದ ಚಿಕಿತ್ಸೆಯಿಂದ ಸ್ವಾಮೀಜಿ ಪೂರ್ಣವಾಗಿ ಗುಣಮುಖರಾಗಿದ್ದರು. ಅವರು ನಿಧನರಾದಾಗ ಕಾಯಿಲೆಯಿಂದ ಇರಲಿಲ್ಲ. ತಮ್ಮ ಸ್ವಂತ ಇಚ್ಛೆಯಿಂದ ಸಮಾಧಿಸ್ಥಿತಿಯಲ್ಲಿ ದೇಹತ್ಯಾಗ ಮಾಡಿದರು. ಗತಿಸುವುದಕ್ಕೆ ಮುಂಚೆ ಎರಡು ತಿಂಗಳಿನಿಂದಲೂ, ಸ್ವಾಮೀಜಿ ಯುವಸಂನ್ಯಾಸಿಗಳಿಗೆ ನಿಯಮಿತವಾಗಿ ಧ್ಯಾನಮಾಡಲು ಪ್ರೋತ್ಸಾಹಿಸುತ್ತಿದ್ದರು ಮತ್ತು ತಾವೇ ಅವರೊಂದಿಗೆ ಧ್ಯಾನ ಮಾಡುತ್ತಿದ್ದರು. ಕೆಲವು ದಿನಗಳಿಂದ ಅವರಲ್ಲಿ ತೀವ್ರ ಜುಗುಪ್ಸೆಯ ಭಾವ ಹುಟ್ಟಿತ್ತು. ಆಗಾಗ ಈ ರೀತಿ ಹಾಡುತ್ತಿದ್ದರು : "ಯಾವ ಪುರುಷಾರ್ಥಕ್ಕೆ, ಯಾವ ಬಯಕೆಯ ತೃಪ್ತಿಗಾಗಿ ಈ ದೇಹವಿನ್ನೂ ಉಸಿರಾಡಬೇಕಾಗಿದೆ?" ಅವರು ನನ್ನನ್ನು ಕೇಳುತ್ತಿದ್ದರು : "ನಿನಗೆ ಠಾಕೂರರು (ಶ್ರೀರಾಮಕೃಷ್ಣರು) ತಮ್ಮ ಕೊನೆಯ ದಿನಗಳಲ್ಲಿ ಕೇಳಲು ಇಚ್ಛಿಸುತ್ತಿದ್ದ ಆ ಎರಡು ಹಾಡುಗಳು ನೆನಪಿನಲ್ಲಿದೆಯೇ?" ನಂತರ ಅವರೇ ಹಾಡಿದರು : "ಓ ಭುವನ ಮೋಹಿನಿಯಾದ ತಾಯಿ, ಜಗದ ಜನರನ್ನು ಅದೆಷ್ಟು ಮಂಕುಗೊಳಿಸಿದ್ದೀಯೆ!" ಇತ್ಯಾದಿ. ಮತ್ತೆ ಹಾಡುತ್ತಿದ್ದರು : "ಓ, ಜಗದಂಬೆ ಶ್ಯಾಮೆಯ ಪದತಲದಲ್ಲಿ ನಾನೆಂದು ಪೂರ್ಣ ಸಮಾಧಿಯನ್ನು ಹೊಂದುವೆನು?" ಇತ್ಯಾದಿ. ಇವು ಅವರ ಅತ್ಯಂತ ಪ್ರೀತಿಯ ಹಾಡುಗಳಾದವು.

ಆದರೆ ನೀನು ತಿಳಿದಂತೆ ಅವರು ಕರ್ಮಯೋಗದ ಆದರ್ಶದ ಕಡೆಗೆ ಜಾಸ್ತಿ ಒತ್ತು ಕೊಡುತ್ತಿದ್ದರು ; ಮಹಾಸಮಾಧಿಗೆ ಹತ್ತು ಹದಿನೈದು ದಿನಗಳ ಮುಂಚೆ ಸೋದರ ತಾರಕ (ಸ್ವಾಮಿ ಶಿವಾನಂದ)ರನ್ನು ವಾರಣಾಸಿಯಲ್ಲಿ ಆಶ್ರಮವೊಂದನ್ನು ತೆರೆಯಲು ಕಳಿಸಿದರು. ಕೆಲವು ದಿನಗಳಿಂದ (ಬೇಲೂರು) ಮಠದಲ್ಲಿ ವೇದಾಭ್ಯಾಸಕ್ಕಾಗಿ ಕಾಲೇಜೊಂದನ್ನು ತೆರೆಯಲು ಉತ್ಸುಕರಾಗಿದ್ದರು. ಅವರು ಮಹಾಸಮಾಧಿಯನ್ನು ಹೊಂದಿದ ದಿನವೂ ಕೂಡ, ಬೊಂಬಾಯಿ ಮತ್ತು ಪೂನಾದ ಪ್ರಕಾಶಕರುಗಳಿಗೆ ಅವರು ವೇದಗಳ ಬಗ್ಗೆ ಪ್ರಕಟಿಸಿದ ಪುಸ್ತಕಗಳನ್ನು ಕಳಿಸಲು ಪತ್ರ ಬರೆಯಲಾಯಿತು. ಆ ದಿನ ವೇದದ ಬಗೆಗಿನ ಕಾಲೇಜಿನ ಬಗ್ಗೆ ಅವರು ನನಗೆ ಅನೇಕ ವಿಚಾರಗಳನ್ನು ತಿಳಿಸಿದರು. ನಾನು ಅವರಿಗೆ ವೇದಗಳ ಅಧ್ಯಯನದಿಂದ ಆಗುವ ಪ್ರಯೋಜನ ವೇನೆಂದು ಕೇಳಿದೆ. ಅವರ ಸರಳವಾದ ಉತ್ತರವೆಂದರೆ—ಅದರಿಂದ ಜನರು ಹಿಂದೂಧರ್ಮಕ್ಕೆ ತಾವೇ ಸೇರಿಸಿದ ಮೂಢ ನಂಬಿಕೆಗಳಿಂದ ಬಿಡುಗಡೆ ಹೊಂದುವರು ಎಂದು.

ಆ ದಿನ ಬೆಳಗ್ಗೆ, ಧ್ಯಾನದ ನಂತರ ನನ್ನನ್ನು ಅಣಕಿಸಿ, ವ್ಯಂಗ್ಯ ಮಾಡಿ, ನಾವೆಲ್ಲ ನಕ್ಕು ನಕ್ಕು ತಡೆಯಲಾರದೆ ನೆಲದ ಮೇಲೆ ಬಿದ್ದು ಹೊರಳಾಡುವಂತೆ ಮಾಡಿದರು. ಎಂದಿನಂತೆ ಹಣ್ಣು ತಿಂದು ಬಿಸಿಯಾದ ಹಾಲು ಕುಡಿದರು; ಆದರೆ ಆ ದಿನ ಅವರು ನನಗೇ ತಿನ್ನಿಸಲು ಬಹಳ ಕಾತರರಾದರು. ನಂತರ ಗಂಗಾ ನದಿಯಲ್ಲಿ ಹಿಡಿದ ಋತುಮಾನದ ಹೊಸ ಮೀನುಗಳನ್ನು ತರಲಾಯಿತು; ಸ್ವಾಮೀಜಿ ಅದಕ್ಕೆ ನಾನು ಕೊಟ್ಟ ಬೆಲೆಯ ಬಗ್ಗೆ ಹಾಸ್ಯ ಮಾಡಿದರು. ಪೂರ್ವ ಬಂಗಾಳ (ಈಗಿನ ಬಾಂಗ್ಲಾದೇಶ)ದಿಂದ ಮಠಕ್ಕೆ ಬಂದಿದ್ದ ಅವರ ಶಿಷ್ಯರೊಬ್ಬರಿಗೆ ಹೇಳಿದರು: "ನಿಮ್ಮ ಕಡೆ, ಹೊಸ ಋತುಮಾನದ ಮೊದಲ ಮೀನುಗಳು ಸಿಕ್ಕಾಗ, ಪೂಜಿಸುತ್ತೀರೆಂದು ತಿಳಿದಿದ್ದೇನೆ. ನೀವು ಅಲ್ಲಿ ಆಚರಿಸುವಂತೆ, ಇಲ್ಲಿಯೂ ಅದೇ ರೀತಿ ಪೂಜೆ ಮಾಡಿ."

ನಾವಿಬ್ಬರೂ ನಡೆದಾಡುತ್ತಿದ್ದಾಗ, ಸ್ವಾಮೀಜಿ ಹೇಳಿದರು : "ಎಂದೂ ನನ್ನನ್ನು ಅನುಕರಣೆ ಮಾಡಬೇಡ. ಠಾಕೂರರು ಯಾರೂ ಯಾರನ್ನೂ ಅನುಕರಿಸುವುದನ್ನು ನಿಷೇಧಿಸುತ್ತಿದ್ದರು. ನನ್ನಂತೆ ದುಂದುಗಾರನೂ ಆಗಬೇಡ." ನಂತರ ಮತ್ತೆ ಅವರು ವೇದದ ಕಾಲೇಜಿನ ಬಗ್ಗೆ ವಿವರವಾಗಿ ಮಾತನಾಡಿದರು. ಸುಷುಮ್ನಾ ನಾಡಿಯ ಬಗ್ಗೆ ವೇದಗಳೇನು ಹೇಳುತ್ತವೆಯೆಂದು ತಾವು ತಿಳಿದಿರುವುದಾಗಿಯೂ, ಆದರೆ ಅದರ ಬಗೆಗಿನ ಭಾಷ್ಯ ತಮಗೆ ಸಮರ್ಪಕವಾಗಿ ತೋರಲಿಲ್ಲ ವೆಂದೂ ಹೇಳಿದರು. ಆದ್ದರಿಂದ ನಾವು ಮೂಲಪಾಠವನ್ನು ನೋಡಿ, ಸರಿಯಾದ ಅರ್ಥವನ್ನು ತಿಳಿದುಕೊಳ್ಳಬೇಕೆಂದರು.

ಬೆಳಗ್ಗೆ ಎಂಟೂವರೆ ಗಂಟೆಯ ನಂತರ ಪೂಜಾಕೋಣೆಗೆ ಅವರು ಧ್ಯಾನ ಮಾಡುವುದಕ್ಕೆ ಹೋದರು. ನಾನು ಒಂಬತ್ತೂವರೆ ಗಂಟೆಗೆ ಪೂಜೆ ಮಾಡಲು ಅಲ್ಲಿಗೆ ಹೋದಾಗ, ನನ್ನನ್ನು ನೋಡಿದ ಸ್ವಾಮೀಜಿ, ತಾವು ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದ ಸಣ್ಣ ಚಾಪೆಯನ್ನು ಪಕ್ಕದಲ್ಲಿದ್ದ, ನಾವು ಠಾಕೂರರ "ಮಲಗುವ ಕೋಣೆ" ಎಂದು ಕರೆಯುತ್ತಿದ್ದ (ರಾತ್ರಿ ಹೊತ್ತು ಅಲ್ಲಿ ಮಂಚವೊಂದರ ಮೇಲೆ ಶ್ರೀರಾಮಕೃಷ್ಣರ ಭಾವಚಿತ್ರವೊಂದನ್ನು ಇಡುತ್ತಿದ್ದೆವು) ಕೋಣೆಯಲ್ಲಿ ಹಾಸಲು ತಿಳಿಸಿದರು. ನಾನು ಅದರಂತೆ ಮಾಡಿದಾಗ, ಅವರು ಆ ಕೋಣೆಯ ಕಿಟಕಿ, ಬಾಗಿಲುಗಳೆಲ್ಲವನ್ನೂ ಮುಚ್ಚುವಂತೆ ತಿಳಿಸಿದರು. ಬೇರೆಯ ದಿನಗಳಲ್ಲಿ ನಾನು ಪೂಜಾ ಕೋಣೆಯಲ್ಲಿ ಪೂಜೆಮಾಡುತ್ತಿದ್ದಾಗ, ಅವರು ಒಂದು ಮೂಲೆಯಲ್ಲಿ ಕುಳಿತು ಧ್ಯಾನ ಮಾಡುತ್ತಿದ್ದರು. ಆ ದಿನ ಅವರು ತಮ್ಮ ಪದ್ಧತಿ ಬದಲಾಯಿಸಿದರು. ಹನ್ನೊಂದು ಗಂಟೆಯ ವೇಳೆಗೆ, ಧ್ಯಾನದಿಂದ ಎದ್ದು ತಮಗೆ ತಾವೇ ಹಾಡಿಕೊಂಡರು: "ನನ್ನ ತಾಯಿ ಕಪ್ಪಾಗಿಹಳೆ? ಅವಳು ಕಪ್ಪಗಿದ್ದರೂ, ನನ್ನ ಹೃದಯಪದ್ಮವನ್ನು ಬೆಳಗುತ್ತಿರುವವಳಲ್ಲ!" ಇತ್ಯಾದಿ.

ಸ್ವಾಮೀಜಿ, ಊಟದ ವೇಳೆಯಲ್ಲಿ ಬೆಳಗ್ಗೆ ತಂದ ಮೀನಿನಿಂದ ಮಾಡಿದ ವಿವಿಧ ಬಗೆಯ ಅಡುಗೆಯನ್ನು ಸಂತೃಪ್ತಿಯಿಂದ ತಿಂದರು. ಹಿಂದಿನ ದಿನ ತಾವು ಏಕಾದಶಿ ಉಪವಾಸವನ್ನು ಮಾಡಿದ್ದರಿಂದ ತುಂಬಾ ಹಸಿವೆಯಾಗಿತ್ತು ಎಂದರು. ಊಟವಾದ ನಂತರ ವಿವಿಧ ವಿಷಯಗಳ ಬಗ್ಗೆ ನನ್ನೊಂದಿಗೆ ಮಾತನಾಡಿದರು. ನಂತರ ಸ್ವಲ್ಪ ವಿಶ್ರಮಿಸಿದರು. ಮಧ್ಯಾಹ್ನ ಒಂದು ಘಂಟೆಯ ನಂತರ ನನ್ನನ್ನೆಬ್ಬಿಸಿ ಹೇಳಿದರು: "ಬಾ, ಏನಾದರೂ ಓದೋಣ. ನನಗೆ ಸರಿಯಾಗಿ ನಿದ್ದೆ ಬರಲಿಲ್ಲ. ಧ್ಯಾನದ ನಂತರ ತಲೆ ಬಿಸಿಯಾಗಿದೆ. ಮೆದುಳು ದುರ್ಬಲವಾದಂತೆ ತೋರುತ್ತಿದೆ." ನಾವು ಓದುವ ಕೋಣೆಯಲ್ಲಿ ಕುಳಿತೆವು. ಸುಮಾರು ಮೂರು ಗಂಟೆ ಕಾಲ ಪಾಣಿನಿಯ ವ್ಯಾಕರಣದ ಬಗ್ಗೆ ಮಾತನಾಡಿದರು. ನಾಲ್ಕು ಗಂಟೆಯ ಹೊತ್ತಿಗೆ ನನ್ನನ್ನು ಕರೆದುಕೊಂಡು ಮಠದ ಉದ್ಯಾನವನದ ಎದುರು ರಸ್ತೆಯಲ್ಲಿ ಸ್ವಲ್ಪ ಓಡಾಡಿದರು. ರಸ್ತೆಯ ಬದಿಯಲ್ಲಿ ಒಂದು ಉದ್ಯಾನವನವನ್ನು ಕಂಡಾಗ, ಅಮೆರಿಕಾದಲ್ಲಿ ಶ್ರೀಯುತ ಲೆಗೆಟ್‌ರು ಹೊಂದಿದ್ದ ಸುಂದರವಾದ ಉದ್ಯಾನವನದ ಬಗ್ಗೆ ವಿವರಿಸಿದರು. ಆ ದೇಶದಲ್ಲಿ ಜನರು ಯಂತ್ರಗಳ ಸಹಾಯದಿಂದ ಎಷ್ಟು ಸುಲಭವಾಗಿ ತಮ್ಮ ಉದ್ಯಾನವನಗಳನ್ನು ಶುಚಿಯಾಗಿಯೂ ಸುಂದರವಾಗಿಯೂ ಇಟ್ಟುಕೊಳ್ಳುತ್ತಾರೆಂದು ವಿವರಿಸಿದರು.

ಐದೂವರೆ ಗಂಟೆಯ ಹೊತ್ತಿಗೆ ಮಠಕ್ಕೆ ವಾಪಸು ಬಂದೆವು. ನಂತರ ಸ್ವಾಮೀಜಿಯವರು ಯುರೋಪಿನ ನಾಗರಿಕತೆಯ ಚರಿತ್ರೆಯ ಬಗ್ಗೆ ವಿವರವಾಗಿ ವಿವರಿಸಿದರು. ವಸಾಹತುಶಾಹಿಯ ಚರಿತ್ರೆಯ ಬಗ್ಗೆಯೂ ಮಾತನಾಡಿದರು.

ಕತ್ತಲಾದ ನಂತರ, ನಾನು ಪೂಜಾ ಕೋಣೆಗೆ ಆರತಿ ಮಾಡಲು ಹೋದಾಗ, ಸ್ವಾಮೀಜಿ ಶಶಿ(ಸ್ವಾಮಿ ರಾಮಕೃಷ್ಣಾನಂದ)ಯ ತಂದೆಯ ಜೊತೆಯಲ್ಲಿ ಬಹಳ ಹೊತ್ತು ಮಾತನಾಡಿದರು. ನಂತರ ಮಹಡಿಯ ಮೇಲಿನ ತಮ್ಮ ಕೋಣೆಗೆ ಹೋದರು. ಆ ದಿನಗಳಲ್ಲಿ ಪೂರ್ವಬಂಗಾಳದಿಂದ ಬಂದಿದ್ದ ವ್ರಜೇಂದ್ರ ಎಂಬುವನು ಅವರಿಗೆ ಸಹಾಯಕನಾಗಿದ್ದ. ಸ್ವಾಮೀಜಿ ಅವನಿಗೆ ಹೇಳಿದರು: "ನಾನು ದೈಹಿಕವಾಗಿ ಬಹಳ ಹಗುರವಾಗಿದ್ದೇನೆಂದು ಅನ್ನಿಸುತ್ತಿದೆ. ನನಗೆ ಬಹಳ ಆರಾಮವಾಗಿದೆ." ತಮ್ಮ ಕೋಣೆಯಲ್ಲಿ ಕುಳಿತು, ತಮ್ಮ ಜಪಮಾಲೆಯನ್ನು ತಂದುಕೊಡುವಂತೆ ವ್ರಜೇಂದ್ರನಿಗೆ ಹೇಳಿದರು. ಅನಂತರ, ಏಕಾಂಗಿಯಾಗಿರಲು ಇಚ್ಛಿಸಿ, "ನಾನು ಕರೆದಾಗ ಒಳಗೆ ಬಾ," ಎಂದು ವ್ರಜೇಂದ್ರನಿಗೆ ಹೇಳಿದರು.

ಒಂದು ಗಂಟೆಯನಂತರ ಸ್ವಾಮೀಜಿ ಅವನನ್ನು ಒಳಗೆ ಕರೆದು, ಸ್ವಲ್ಪ ಹೊತ್ತು ತಮಗೆ ಗಾಳಿ ಬೀಸಲೂ ಅನಂತರ ಪಾದಗಳನ್ನು ಒತ್ತಲೂ ತಿಳಿಸಿದರು. ತಮ್ಮ ಕಾಲುಗಳು ಒತ್ತಲ್ಪಡುತ್ತಿದ್ದಾಗ, ಸ್ವಾಮೀಜಿ ಅರ್ಧಗಂಟೆಯ ಹೊತ್ತು ತೂಕಡಿಸಿದರು. ನಂತರ ಅವರ ಕೈಗಳು ಕ್ಷಣಕಾಲ ನಡುಗಿದವು. ಮರುನಿಮಿಷದಲ್ಲಿಯೇ, ಅವರು ದೀರ್ಘವಾಗಿ ಶ್ವಾಸ ಬಿಟ್ಟು ಸಮಾಧಿಗೆ ಏರಿದರು. ವ್ರಜೇಂದ್ರ ಗಾಬರಿಗೊಂಡು, ಗೋಪಾಲದಾದ ಅವರನ್ನು ಕರೆದು ಸ್ವಾಮೀಜಿಗೆ ಏನಾಯಿತೆಂದು ನೋಡಲು ತಿಳಿಸಿದರು. ಕೆಲವೇ ನಿಮಿಷಗಳಲ್ಲಿ ನಾನು ಸ್ವಾಮೀಜಿಯವರ ಕೋಣೆಗೆ ಬಂದೆ. ಅವರು ಪೂರ್ಣ ಸಮಾಧಿಯಲ್ಲಿದ್ದಾರೆಂದು ಅರಿತೆ. ಶಶಿಯ ತಂದೆಯವರಿಗೆ ಹೇಳಿಕಳಿಸಿ, ಸ್ವಾಮೀಜಿಯವರನ್ನು ಸಮಾಧಿಸ್ಥಿತಿಯಿಂದ ಎಬ್ಬಿಸಲು, ಶ್ರೀರಾಮಕೃಷ್ಣರ ಪವಿತ್ರ ನಾಮವನ್ನು ಸ್ವಾಮೀಜಿಯವರ ಕಿವಿಯಲ್ಲಿ ಉಚ್ಚರಿಸುವಂತೆ ಕೇಳಿಕೊಂಡೆ. ಸ್ವಾಮೀಜಿಯವರ ಮುಖಮಂಡಲ ಅದೆಷ್ಟು ತೇಜೋಮಯವಾಗಿತ್ತು! ತೆರೆದುಕೊಂಡಿದ್ದ ಅವರ ಕಣ್ಣುಗಳು ಸ್ವರ್ಗೀಯ ಕಾಂತಿಯ ಪ್ರಭೆಯನ್ನು ಹೊರಸೂಸುತ್ತಿದ್ದವು. ಬರೀ ಕೌಪೀನಧಾರಿಯಾಗಿದ್ದ ಅವರ ದೇಹ ಅದೆಷ್ಟು ಸುಂದರವೂ ಪ್ರಕಾಶಯುಕ್ತವೂ ಆಗಿತ್ತು! ಮರುದಿನ ಕೂಡ ಅವರ ಕಾಂತಿಯುಕ್ತವಾದ ಮುಖವನ್ನು ನೋಡಿದವರು ತಮ್ಮ ಎಲ್ಲಾ ದುಃಖವನ್ನು ಮರೆತರು. ಸಾಕ್ಷಾತ್ ಶಿವನೇ ಅಲ್ಲಿ ಪವಡಿಸಿದಂತೆ ತೋರಿತು. ಸ್ವಾಮೀಜಿಯವರ ದೇಹ ಜೀವವಿದ್ದಾಗ ಹೇಗೆಯೊ, ಈಗಲೂ ಹಾಗೇ ಕಂಡಿತು. ತಮ್ಮ ಸ್ವಇಚ್ಛೆಯಿಂದ ದೇಹಬಿಟ್ಟರು. ಆ (ಮಹಾಸಮಾಧಿಯ ದಿನದ) ರಾತ್ರಿ ಡಾಕ್ಟರ್ ಮುಜುಮ್‌ದಾರರನ್ನು ಕರೆಸಿ, ಪರೀಕ್ಷಿಸಲು ಕೇಳಿ ಕೊಂಡೆವು. ಸ್ವಾಮೀಜಿಯವರ ದೇಹವನ್ನು ಪರೀಕ್ಷಿಸಿದರೂ ಕೂಡ, ಡಾಕ್ಟರಿಗೆ ಮರಣದ ಸರಿಯಾದ ಕಾರಣ ತಿಳಿಯಲಿಲ್ಲ.

ಸ್ವಾಮೀಜಿಗೆ, ಶ್ರೀರಾಮಕೃಷ್ಣರು ಹೇಳುತ್ತಿದ್ದರು: "ನೀನು ಯಾರೆಂಬುದನ್ನು ನಿಜವಾಗಿ ಯಾವ ದಿನ ಅರಿವೆಯೋ, ಅಂದೇ ನೀನು ದೇಹ ಬಿಡುವೆ." ಅದರಂತೆ ಇದು ನಡೆಯಿತು.

ಸಂಗ್ರಹ : ಎನ್. ಗೋಪೀನಾಥ

**ಆಧಾರ :** Memories of a Loving Soul